ಕರ್ನಾಟಕ ಉಚ್ಚ ನ್ಯಾಯಾಲಯ

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಜಿ.ಎಂ. ಪಾಟೀಲ್

ಮೆಹಬೂಬ್ -ವಿರುದ್ಧ ಕರ್ನಾಟಕ ರಾಜ್ಯ, ಅದರ ಕಾರ್ಯದರ್ಶಿ ಮೂಲಕ ಮತ್ತು ಇತರರು

ರಿಟ್ ಅರ್ಜಿಸಂಖ್ಯೆ: 202056/2018, ದಿನಾಂಕ 2 ನೇ ಜನವರಿ, 20

ಆಜ್ಞೆ

ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ:

ಪ್ರಸ್ತುತ ಅರ್ಜಿದಾರನು, ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆ ಇಲಾಖೆಯಲ್ಲಿ ವಿಜಯಪುರ ಜಿಲ್ಲೆಯ ತಿಕೋಟದಲ್ಲಿ ' ಡಿ ' ಗುಂಪಿನ ನೌಕರನಾಗಿದ್ದ ಸೈಯ್ಯದ್ ಹುಸೇನ್ರವರ ಮಗ ಆಗಿದ್ದು, ಅರ್ಜಿಸಂಖ್ಯೆ: 1440/2012 ರಲ್ಲಿದಿನಾಂಕ: 28.6.2017 ರಂದು ಕರ್ನಾಟಕ ರಾಜ್ಯ ಆಡಳಿತಾತ್ಮಕ ನ್ಯಾಯಾಧಿಕರಣ, ಬೆಂಗಳೂರು (ಸಂಕ್ಷಿಪ್ತತೆಗಾಗಿ ' ನ್ಯಾಯಾಧಿಕರಣ) ಗುಣಾರ್ಹತೆಗಳ ಮೇಲೆ ಅರ್ಜಿಯನ್ನು ವಜಾಗೊಳಿಸಿ, ಹೊರಡಿಸಿದ ಆದೇಶದ ವಿರುದ್ಧ ಈ ನ್ಯಾಯಾಲಯದ ಮುಂದೆ ಬಂದಿದ್ದಾರೆ.

1. ಪ್ರಕರಣದ ಸಂಗತಿಗಳು:

2. ಅರ್ಜಿದಾರನ ತಂದೆ ಸೈಯದ್ ಹುಸೇನ್, ಪಶುಸಂಗೋಪನೆ ಹಾಗೂ ಪಶುವೈದ್ಯಕೀಯ ಸೇವೆಗಳು, ಬೆಂಗಳೂರಿನ ಆಯುಕ್ತರು ಅನುಬಂಧ- ಎ 7 ರಲ್ಲಿ ಹೊರಡಿಸಿದದಿನಾಂಕ: 31.01.2012 ರ ಆದೇಶವನ್ನು ತಳ್ಳಿಹಾಕಲು ಹಾಗೂದಿನಾಂಕ: 22.12.2011 ರ ತನ್ನ ಅರ್ಜಿಯ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ವೈದ್ಯಕೀಯ ಆಧಾರಗಳ ಮೇಲೆ ಸೇವೆಯಿಂದ ನಿವೃತ್ತಿಗೊಳಿಸಲು ಅಭ್ಯರ್ಥಿಯನ್ನು ಅನುಮತಿಸುವುದಕ್ಕೆ ಎದುರುದಾರರಿಗೆ ಸೂಚಿಸಲು ಹಾಗೂ ಅಷ್ಟೇ ಅಲ್ಲದೆ, ಕರ್ನಾಟಕ ಸಿವಿಲ್ ಸೇವೆಗಳು (ಅನುಕಂಪ ಆಧಾರಗಳ ಮೇಲೆ ನೇಮಕಾತಿ) (ಆರನೇ ತಿದ್ದುಪಡಿ) ನಿಯಮಗಳು, 2011 ರ 3 ಎ ನಿಯಮದ ಮೇರೆಗೆ ಉಪಬಂಧಿಸಲಾದಂಥ ಅನುಕಂಪದ ಆಧಾರದ ಮೇಲೆ ತನ್ನ ಮಗ ಮೆಹಬೂಬ್ (ಪ್ರಸ್ತುತ ಅರ್ಜಿದಾರ) ನನ್ನು ನೇಮಕಾತಿಯನ್ನು ಮಾಡಿಕೊಳ್ಳಲು ಎದುರುದಾರರಿಗೆ ನಿರ್ದೇಶಿಸಬೇಕೆಂದು ದಿನಾಂಕ 16-2-2012ರಂದು ಈ ನ್ಯಾಯಾಧಿಕರಣದ ಮುಂದೆ ಬಂದಿದ್ದಾರೆ.

3. ಅರ್ಜಿದಾರನು, ನಾಲ್ಕನೇ ಎದುರುದಾರ ಎಂದರೆ ಪಶುಸಂಗೋಪನೆ ಹಾಗೂ ಪಶುವೈದ್ಯಕೀಯ ಸೇವೆ, ತಿಕೋಟ, ವಿಜಯಪುರ ತಾಲ್ಲೂಕು ಹಾಗೂ ಜಿಲ್ಲೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ' ಡಿ ' ಗುಂಪಿನ ನೌಕರರಾಗಿ ಕಾರ್ಯ ನಿರ್ವಹಿಸುತ್ತಿದ್ದರೆಂಬುದು ನ್ಯಾಯಾಧಿಕರಣದ ಮುಂದಿರುವ ಅರ್ಜಿದಾರನ ತಂದೆಯ ವಾದವಾಗಿತ್ತು.ಅರ್ಜಿದಾರನು, ಇಲಾಖೆಯಲ್ಲಿ ಸುದೀರ್ಘವಾದ ಕಳಂಕರಹಿತ ಸೇವೆ ಸಲ್ಲಿಸಿದ್ದಾರೆ.ದುರಾದೃಷ್ಟವಶಾತ್ ಮನವಿದಾರನು (ಅರ್ಜಿದಾರನ ತಂದೆ) ಪಾರ್ಕಿನ್ಸನ್ಸ್ ಕಾಯಿಲೆಯ ಕಾರಣದಿಂದ ಅನಾರೋಗ್ಯಕ್ಕೀಡಾಗಿದ್ದು, ಇದರ ಕಾರಣದಿಂದ ಶೇಕಡಾ 85 ರಷ್ಟು ಕಾರ್ಯನಿರ್ವಹಣಾ

ಸಾಮರ್ಥ್ಯವನ್ನು ಕಳೆದುಕೊಂಡಿದ್ದಾರೆ.ಅವರಿಗೆ ಯಾರೇ ವ್ಯಕ್ತಿಯ ಸಹಾಯವಿಲ್ಲದೆ ಒಬ್ಬರೇ ಓಡಾಡಲು ಆಗುತ್ತಿರಲಿಲ್ಲ ಹಾಗೂ ತನ್ನ ಕರ್ತವ್ಯವನ್ನು ನಿಭಾಯಿಸಲು ಅಸಮರ್ಥರಾಗಿದ್ದರು.ಹಾಗೆಯೇ ವೈದ್ಯಕೀಯ ಆಧಾರಗಳ ಮೇಲೆ ಸೇವೆಯಿಂದ ಸ್ವಯಂ ನಿವೃತ್ತಿ ಪಡೆಯಲು ತನಗೆ ಅನುಮತಿ ನೀಡಬೇಕೆಂದು ಸಂಬಂಧಪಟ್ಟವರನ್ನು ವಿನಂತಿಸಿ,ದಿನಾಂಕ: 22.12.2011 ರಂದು ಅರ್ಜಿಯನ್ನು ಸಲ್ಲಿಸಿದ್ದಾರೆ.

4. ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ ವಿಜಯಪುರ, ಇವರು ವೈದ್ಯಕೀಯ ಪ್ರಮಾಣಪತ್ರವನ್ನು ನೀಡಿದ್ದು, ಅರ್ಜಿದಾರನು, ಪಾರ್ಕಿನ್ಸನ್ಸ್ ಕಾಯಿಲೆಯ ಕಾರಣದಿಂದ ಶೇಕಡಾ 85 ರಷ್ಟು ಕಾರ್ಯನಿರ್ವಹಣಾ ಸಾಮರ್ಥ್ಯವನ್ನು ಎ ಕಳೆದುಕೊಂಡಿದ್ದಾರೆಂದು ತಿಳಿಸಿದ್ದಾರೆ.ಆದುದರಿಂದ ಅವನು ವೈದ್ಯಕೀಯ ಆಧಾರಗಳ ಮೇಲೆ ಸೇವೆಯಿಂದ ನಿವೃತ್ತರಾಗಲು ಅನುಮತಿ ಕೋರಿದ್ದು, ಅಧಿಕಾರವ್ಯಾಪ್ತಿ ಪ್ರಾಧಿಕಾರದ ಮುಂದೆ ಮನವಿ ಸಲ್ಲಿಸಿದ್ದಾರೆ.ದಿನಾಂಕ: 31.01.2012 ರ ಸ್ವೀಕೃತಿ ನೀಡುವ ಮೂಲಕ ಪ್ರಾಧಿಕಾರವು, ಅರ್ಜಿದಾರನ ಹುಟ್ಟಿದದಿನಾಂಕ: 20.2.1952 ಆಗಿದ್ದು, ವಯೋನಿವೃತ್ತಿಯ ವಯಸ್ಸನ್ನು ತಲುಪಿದ ಮೇಲೆ,ದಿನಾಂಕ: 29.02.2012 ರಂದು ಸೇವೆಯಿಂದ ನಿವೃತ್ತರಾಗುತ್ತಿದ್ದರು.ಆದುದರಿಂದ ವೈದ್ಯಕೀಯ ಆಧಾರಗಳ ಮೇಲೆ ಸ್ವಯಂ ನಿವೃತ್ತರಾಗುವ ಸಂಬಂಧ ಅರ್ಜಿದಾರನು ಸಲ್ಲಿಸಿದ ಅರ್ಜಿಯನ್ನು ಎತ್ತಲಾಗುವುದಿಲ್ಲ ಹಾಗೂ ಅದು ನ್ಯಾಯಾಧಿಕರಣದ ಮುಂದೆ ಇಡುವ ಅರ್ಜಿಯ ವಸ್ತು ವಿಷಯವಾಗಿತ್ತು.ನ್ಯಾಯಾಧಿಕರಣವು ಎರಡೂ ಪಕ್ಷಕಾರರ ವಾದವನ್ನು ಆಲಿಸಿದ ನಂತರದಿನಾಂಕ: 28.06.2017 ರ ಪ್ರಶ್ನಿತ ಆದೇಶದ ಮೂಲಕ ಈ ಅರ್ಜಿಯನ್ನು ವಜಾಗೊಳಿಸಿದೆ.

5. ನ್ಯಾಯಾಧಿಕರಣದ ಮುಂದೆ ಅರ್ಜಿಯು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಮೂಲ ಅರ್ಜಿದಾರನು ಮೃತನಾಗಿದ್ದು, ಪ್ರಸ್ತುತ ಅರ್ಜಿದಾರನು, ಕಾಲಮಿತಿಯೊಳಗೆ ಕಾನೂನು ಪ್ರಾತಿನಿಧ್ಯದಂತೆ ದಾಖಲೆಯಲ್ಲಿ ತರಲು ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದು ವಕೀಲರ ಪರಿಷತ್ತಿನಲ್ಲಿ ಕೂಡ ತಿಳಿಸಲಾಗಿದೆ.ಆದುದರಿಂದ, ಪ್ರಸ್ತುತ ಅರ್ಜಿಯನ್ನು ಅನುಮತಿಗಾಗಿ ಸಲ್ಲಿಸಲಾಗಿದೆ.ಅವನು ಮಾತ್ರ ಕಾನೂನು ಪ್ರತಿನಿಧಿ ಹಾಗೂ ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಲು ಅನುಮತಿಯನ್ನು ನೀಡಲಾಗಿದೆ ಎಂದು ಭಾವಿಸಿದ್ದರೂ, ಇನ್ನೂ ಅರ್ಜಿದಾರನು ಯಾವುದೇ ಪರಿಹಾರಕ್ಕೆ ಹಕ್ಕುಳ್ಳವನಾಗಿರುವುದಿಲ್ಲ.

II.ಪಕ್ಷಕಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಮಂಡಿಸಿದ ವಾದಗಳು:

6. ದಾವೆಯ ಪಕ್ಷಕಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ವಾದವನ್ನು ನಾವು ಆಲಿಸಿದ್ದೇವೆ.

7. ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಜಿ.ಜಿ. ಚಗಶೆಟ್ಟಿಯವರು, ಎರಡನೇ ಎದುರುದಾರನು ಹೊರಡಿಸಿದ ಆದೇಶವನ್ನು ದೃಢಪಡಿಸಿ ಅರ್ಜಿಯನ್ನು ವಜಾಗೊಳಿಸಿ, ನ್ಯಾಯಾಧಿಕರಣವು ಹೊರಡಿಸಿದ ಪ್ರಶ್ನಿತ ಆದೇಶವು ದೋಷಪೂರಿತವಾಗಿದೆ.ದಾಖಲೆಯಲ್ಲಿರುವ ಸಾಕ್ಷ್ಯಾಧಾರಕ್ಕೆ ವಿರುದ್ಧವಾಗಿದೆಯೆಂದು ನಿವೇದಿಸಿದ್ದಾರೆ.ಅಷ್ಟೇ ಅಲ್ಲದೆ, ದಾಖಲೆಯಲ್ಲಿರುವ ಸಾಕ್ಷ್ಯಾಧಾರವು, ಮೃತನು ಎಂದರೆ ಅರ್ಜಿದಾರನ ತಂದೆಯು, ಶೇಕಡಾ 85 ರಷ್ಟು ಕಾರ್ಯನಿರ್ವಹಣಾ ಸಾಮರ್ಥ್ಯವನ್ನು ಕಳೆದುಕೊಂಡಿದ್ದರಿಂದ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥನಾಗಿದ್ದನೆಂಬುದನ್ನು ಸ್ಪಷ್ಟವಾಗಿ ಚಿತ್ರಿಸಿದ್ದಾರೆಂದು ನಿವೇದಿಸಿದ್ದರು. ದಸ್ತಾವೇಜನ್ನು ನ್ಯಾಯಾಧಿಕರಣದ ಹಾಗೂ ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ಹಾಜರುಪಡಿಸಿದ್ದರೂ, ಎರಡನೇ ಎದುರುದಾರ ಹಾಗೂ ನ್ಯಾಯಾಧಿಕರಣಗಳೆರಡೂ ಇದನ್ನು

ಪರಿಗಣಿಸಿಲ್ಲ.ಆದುದರಿಂದ, ಅವರು, ಎರಡನೇ ಎದುರುದಾರನು ಹೊರಡಿಸಿದ ಆದೇಶಗಳನ್ನು ದೃಢಪಡಿಸಿ ನ್ಯಾಯಾಧಿಕರಣವು ಹೊರಡಿಸಿದ ಪ್ರಶ್ನಿತ ಆದೇಶವನ್ನು ಸಮರ್ಥಿಸಲು ಸಾಧ್ಯವಿಲ್ಲವೆಂದು ವಾದಿಸಿದ್ದಾರೆ.

8. ಅಷ್ಟೇ ಅಲ್ಲದೆ, ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) (ಆರನೇ ತಿದ್ದುಪಡಿ) ನಿಯಮಗಳು, 2011,ದಿನಾಂಕ: 13.10.2011 ರಂದು ಜಾರಿಗೆ ಬಂದಿದ್ದುದಿನಾಂಕ: 22.12.2011 ರಂದು ಅರ್ಜಿಯನ್ನು ಸಲ್ಲಿಸಲಾಗಿತ್ತೆಂದು ವಾದಿಸಿದ್ದಾರೆ.ನ್ಯಾಯಾಧಿಕರಣವು ಅರ್ಜಿಯನ್ನು ಪರಿಗಣಿಸುವ ಬದಲು ದೋಷಪೂರ್ಣವಾಗಿ ತಿರಸ್ಕರಿಸಿದೆ.ಆದುದರಿಂದ, ಅವರು, ರಿಟ್ ಅರ್ಜಿಯನ್ನು ಪುರಸ್ಕರಿಸುವ ಮೂಲಕ ಎರಡನೇ ಎದುರುದಾರನು ಹೊರಡಿಸಿದ ಹಿಂಬರಹವನ್ನು ದೃಢೀಕರಿಸಿರುವ ನ್ಯಾಯಾಧಿಕರಣವು ಹೊರಡಿಸಿದ ಪ್ರಶ್ನಿತ ಆದೇಶವನ್ನು ರದ್ದುಗೊಳಿಸಲು ಕೋರಿದ್ದಾರೆ.

9. ಇದಕ್ಕೆ ವಿರುದ್ಧವಾಗಿ, ಶ್ರೀ ಕೆ.ಎಂ. ಗಾಟೆ, ಹೆಚ್ಚುವರಿ ಸರ್ಕಾರಿ ವಕೀಲರು, ಇವರು, ನ್ಯಾಯಾಧಿಕರಣವು ಹೊರಡಿಸಿದ ಪ್ರಶ್ನಿತ ಆದೇಶ ಹಾಗೂದಿನಾಂಕ: 31.01.2012 ರಂದು ಎರಡನೇ ಎದುರುದಾರನು ಹೊರಡಿಸಿದ ಹಿಂಬರಹವನ್ನು ಸಮರ್ಥಿಸಲು ಕೋರಿದ್ದಾರೆ.ಅಷ್ಟೇ ಅಲ್ಲದೆ, ಒಪ್ಪಿಕೊಂಡಿರುವಂತೆ, ಅರ್ಜಿದಾರನ ಮೂಲ ಹುಟ್ಟಿದದಿನಾಂಕ: 20.02.1952 ಆಗಿದ್ದು, ಅರ್ಜಿದಾರನು ಸಾಮಾನ್ಯ ಸನ್ನಿವೇಶಗಳಲ್ಲಿದಿನಾಂಕ: 29.02.2012 ರಂದು ನಿವೃತ್ತರಾಗಿರುತ್ತಿದ್ದರು.ನಿಯಮಗಳ ಅನುಕೂಲವನ್ನು ಪರಿಗಣನೆಗೆ ತೆಗೆದುಕೊಂಡು, ಮೂಲ ಅರ್ಜಿದಾರನು ಅರ್ಜಿಯನ್ನು ಸಲ್ಲಿಸಿದ್ದಾನೆ.ಪ್ರಾಧಿಕಾರಗಳು ಹಾಗೂ ನ್ಯಾಯಾಧಿಕರಣವು ದಾಖಲೆಯಲ್ಲಿರುವ ಸಂಪೂರ್ಣ ಸಾಕ್ಷ್ಯಾಧಾರವನ್ನು ಪರಿಗಣಿಸಿ, ಅರ್ಜಿದಾರನು, ಕರ್ನಾಟಕ ಸಿವಿಲ್ ಸೇವೆಗಳು (ಅನುಕಂಪದ ಆಧಾರಗಳ ಮೇಲೆ ನೇಮಕಾತಿ) (ಆರನೇ ತಿದ್ದುಪಡಿ) ನಿಯಮಗಳು, 2011 ರ 3 ಎ ನಿಯಮದ ಮೇರೆಗೆ ಅಗತ್ಯಪಡಿಸಲಾದಂಥ ಸಾರ್ವಜನಿಕ ಉದ್ದೇಶಕ್ಕಾಗಿ, ಕರ್ತವ್ಯದಲ್ಲಿರುವಾಗ ಶಾಶ್ವತವಾಗಿ ಅಸಮರ್ಥನಾಗಿದ್ದಾನೆಂಬುದನ್ನು ತೋರಿಸಲು ಯಾವುದೇ ಸಾಕ್ಷ್ಯಾಧಾರ ದಸ್ತಾವೇಜನ್ನು ಮೂಲ ಅರ್ಜಿದಾರ ಹಾಜರುಪಡಿಸಿರಲಿಲ್ಲವೆನ್ನುವ ಆಧಾರದ ಮೇಲೆ ಅರ್ಜಿಯನ್ನು ಸರಿಯಾಗಿಯೇ ತಿರಸ್ಕರಿಸಿದೆ.

III.ನಿರ್ಧರಣೆಗಾಗಿ ಅಂಶ:

10. ಪಕ್ಷಕಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಮಂಡಿಸಲಾದ ಮೇಲಿನ ವೈರುಧ್ಯದ ವಾದಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಪ್ರಸ್ತುತ ರಿಟ್ ಅರ್ಜಿಯಲ್ಲಿ ನಮ್ಮ ಪರಿಗಣನೆಗಾಗಿ ಉದ್ಭವಿಸಿದ ಒಂದು ವಿವಾದಾಂಶ ಏನೆಂದರೆ:

66 " ಮೂಲ ಅರ್ಜಿದಾರ ಸೈಯದ್ ಹುಸೇನ್ನು ಪ್ರಸಕ್ತ ಪ್ರಕರಣದ ಸಂಗತಿಗಳು ಹಾಗೂ ಸನ್ನಿವೇಶಗಳಲ್ಲಿದಿನಾಂಕ: 22.12.2011 ರಂದು ಅವನು ಸಲ್ಲಿಸಿದ ಅರ್ಜಿಯ ಪರಿಭಾಷೆಯಲ್ಲಿನ ವೈದ್ಯಕೀಯ ಆಧಾರಗಳ ಮೇಲೆ ಸೇವೆಯಿಂದ ನಿವೃತ್ತಿಗೊಳಿಸಲು ಅವನಿಗೆ ಅನುಮತಿ ನೀಡುವ ವಾದವನ್ನು ಮಂಡಿಸಿದ್ದಾನೆಯೇ?"

III.ಪರಿಗಣನೆ:

11. ಪಕ್ಷಕಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಮಂಡಿಸಿದ ವಾದಗಳಿಗೆ ನಮ್ಮ ತೀವ್ರಾಪೇಕ್ಷೆಯ ಪರಿಗಣನೆಯನ್ನು ನೀಡಿದ್ದು, ದಾಖಲೆಯಲ್ಲಿರುವ ಸಂಪೂರ್ಣ ಸಾಕ್ಷ್ಯಾಧಾರವನ್ನು ಎಚ್ಚರಿಕೆಯಿಂದ ಅವಗಾಹಿಸಿದ್ದೇವೆ.

12. ಅರ್ಜಿದಾರನ ತಂದೆ, ಮೂಲ ಅರ್ಜಿದಾರ ಸೈಯದ್ ಹುಸೇನ್, ನಾಲ್ಕನೇ ಎದುರುದಾರನ ಅಧೀನದಲ್ಲಿ ' ಡಿ ' ಗುಂಪಿನ ನೌಕರನಾಗಿ ಸೇವೆ ಸಲ್ಲಿಸಿದ್ದು, ಇವನು ವೈದ್ಯಕೀಯ ಅಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ತಿಕೋಟಾ, ವಿಜಯಪುರ ಜಿಲ್ಲೆ ಇವರು ಹೊರಡಿಸಿದ ವೈದ್ಯಕೀಯ ಪ್ರಮಾಣಪತ್ರ ಹಾಗೂ ಡಾ || ಭಗವತಿ ನ್ಯೂರೋಕೇರ್ ಸೆಂಟರ್, ವಿಜಯಪುರ ಇವರು ಹೊರಡಿಸಿದ ಮತ್ತೊಂದು ವೈದ್ಯಕೀಯ ಪ್ರಮಾಣಪತ್ರದ ಪ್ರಕಾರ ತಾನು ಪಾರ್ಕಿನ್ಸನ್ ಕಾಯಿಲೆಯ ಕಾರಣದಿಂದ ಶೇಕಡಾ 85 ರಷ್ಟು ಕಾರ್ಯನಿರ್ವಹಣಾ ಸಾಮರ್ಥ್ಯದಿಂದ ಬಳಲುತ್ತಿದ್ದನೆನ್ನುವ ವೈದ್ಯಕೀಯ ಆಧಾರದ ಮೇಲೆ ಸೇವೆಯಿಂದ ನಿವೃತ್ತಿ ಹೊಂದಲುದಿನಾಂಕ: 22.12.2011 ರಂದು ಅರ್ಜಿಯನ್ನು ಸಲ್ಲಿಸಿದ್ದನು.

13. ಅಧಿಕಾರ ವ್ಯಾಪ್ತಿಯುಳ್ಳ ಪ್ರಾಧಿಕಾರಿಗಳು ಅರ್ಜಿಯನ್ನು ಹಾಗೂ ವೈದ್ಯಕೀಯ ಪ್ರಮಾಣಪತ್ರವನ್ನು ಪರಿಗಣಿಸಿ,ದಿನಾಂಕ: 31.01.2012 ರ ಹಿಂಬರಹದ ಮೂಲಕ ಮುಖ್ಯವಾಗಿ ಅರ್ಜಿದಾರನ ಹುಟ್ಟಿದದಿನಾಂಕ: 20.02.1952 ಆಗಿದೆಯೆಂಬ ಆಧಾರದ ಮೇಲೆ ಹಾಗೂ ಸಾಮಾನ್ಯ ಸನ್ನಿವೇಶದಲ್ಲಿ ಅರ್ಜಿದಾರನುದಿನಾಂಕ: 29.02.2012 ರಂದು ಸೇವೆಯಿಂದ ನಿವೃತ್ತಿಗೊಳ್ಳಬೇಕಾಗಿದ್ದುದರಿಂದ ವೈದ್ಯಕೀಯ ಆಧಾರದ ಮೇಲೆ ಸೇವೆಯಿಂದ ನಿವೃತ್ತಿಗೊಳಿಸಲು ಕೋರಿದ್ದ ಅವನ ಅರ್ಜಿಯನ್ನು ಪರಿಗಣಿಸುವ ಪ್ರಶ್ನೆ ಉದ್ಭವಿಸುವುದಿಲ್ಲವೆಂಬ ಆಧಾರದ ಮೇಲೆ ಅರ್ಜಿಯನ್ನು ತಿರಸ್ಕರಿಸಲಾಗಿದೆ ಹಾಗೂ ಇದನ್ನು ಪ್ರಶ್ನಿತ ಆದೇಶದಲ್ಲಿ ನ್ಯಾಯಾಧಿಕರಣವು ದೃಢೀಕರಿಸಿದೆ.

14. ಪಕ್ಷಕಾರರ ನಡುವಿನ ವಿವಾದವನ್ನು ನಿರ್ಧರಿಸುವ ಸಲುವಾಗಿ, ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) (ಆರನೇ ತಿದ್ದುಪಡಿ) ನಿಯಮಗಳು, 2011 ರ 3 ಎ ನಿಯಮದ ತಿದ್ದುಪಡಿ ಮಾಡಲಾದ ಉಪಬಂಧಗಳನ್ನು ಪರಿಗಣಿಸಲು ಇದು ಸಂಬಂಧಪಟ್ಟಿರುವುದಾಗಿದ್ದು, ಇದನ್ನು ಈ ಮುಂದಿನಂತೆ ಓದಲಾಗಿದೆ:

" 3 ಎ. ವೈದ್ಯಕೀಯ ಆಧಾರಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರನ ಅವಲಂಬಿತರ ನೇಮಕಾತಿ:

(1) ಈ ನಿಯಮಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ವೈದ್ಯಕೀಯ ಆಧಾರಗಳ ಮೇಲೆ ನಿವೃತ್ತಿಹೊಂದಿದ ಸರ್ಕಾರಿ ನೌಕರನ ಅವಲಂಬಿತರು ಅನುಕಂಪದ ಆಧಾರಗಳ ಮೇಲೆ ನೇಮಕಗೊಳ್ಳಲು ಅರ್ಹರಾಗತಕ್ಕದ್ದು.

( 2) ನೇಮಕಾತಿಗಳ ಅರ್ಹತಾ ಷರತ್ತುಗಳ ಎಲ್ಲಾ ಷರತ್ತುಗಳು ಹಾಗೂ ಅರ್ಜಿಯ ಪ್ರಕ್ರಿಯೆ ಹಾಗೂ ನಿಯಮಗಳ ಅಡಿಯಲ್ಲಿ ಬರುವ ಮೃತ ಸರ್ಕಾರಿ ನೌಕರನ ಅವಲಂಬಿತರಿಗೆ ಅನ್ವಯವಾಗುವಂಥ 9 ನೇ ನಿಯಮವನ್ನು ಹೊರತುಪಡಿಸಿದ ನೇಮಕಾತಿಯನ್ನು, ವೈದ್ಯಕೀಯ ಆಧಾರಗಳ ಮೇಲಿನ ಅವನ ನಿವೃತ್ತಿಯ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ವೈದ್ಯಕೀಯ ಆಧಾರಗಳ ಮೇಲೆ ನಿವೃತ್ತಿಯಾದ ಸರ್ಕಾರಿ ನೌಕರನ ನೌಕರನ ಅವಲ ಂ ಬಿತರಿಗೆ ಉಚಿತ ವ್ಯತ್ಯಾಸಗಳೊಂದಿಗೆ ಅನ್ವಯಿಸತಕ್ಕದ್ದು.

ಪರಂತು, ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲಿನ ನೇಮಕಾತಿ) (ಆರನೇ ತಿದ್ದುಪಡಿ) ನಿಯಮಗಳು, 2011 ಪ್ರಾರಂಭವಾದ ದಿನಾಂಕದಂದು ವೈದ್ಯಕೀಯ ಆಧಾರಗಳ ಮೇಲೆ ನಿವೃತ್ತಿಗೊಂಡ ಸರ್ಕಾರಿ ನೌಕರನ ಎಲ್ಲಾ ಅರ್ಹ ಅವಲಂಬಿತರಿಗೆ ಸದರಿ ನಿಯಮಗಳು ಪ್ರಾರಂಭವಾದ ದಿನಾಂಕದಿಂದ ಒಂದು ವರ್ಷದೊಳಗೆ ಅನ್ವಯಿಸಬಹುದು.

ವಿವರಣೆ:ಈ ನಿಯಮಗಳ ಉದ್ದೇಶಕ್ಕಾಗಿ,

( i) " ವೈದ್ಯಕೀಯ ಆಧಾರಗಳ ಮೇಲೆ ನಿವೃತ್ತನಾದ ಸರ್ಕಾರಿ ನೌಕರ " ಎಂದರೆ ದೈಹಿಕವಾಗಿ ಅಥವಾ ಮಾನಸಿಕವಾಗಿ ಅಶಕ್ತನಾಗಿರುವ ಸರ್ಕಾರಿ ನೌಕರನು, ಸರ್ಕಾರಿ ಸೇವೆಯ ಕರ್ತವ್ಯದಲ್ಲಿರುವಾಗ ಶಾಶ್ವತವಾಗಿ ಅಸಮರ್ಥನಾಗಿರುವುದು ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲೂಕು ಮಟ್ಟದಲ್ಲಿ ರಚಿಸಿದ ವೈದ್ಯಕೀಯ ಮಂಡಳಿಯು ಪ್ರಮಾಣೀಕರಿಸಲಾದಂಥ, ಕರ್ನಾಟಕ ಸಿವಿಲ್ ಸೇವಾ ನಿಯಮಗಳ ಉಪಬಂಧಗಳ ಪ್ರಕಾರ 1 ನೇ ಜನವರಿ 2010 ರಂದು ಅಥವಾ ತರುವಾಯ ವೈದ್ಯಕೀಯ ಆಧಾರಗಳ ಮೇಲೆ ನಿವೃತ್ತನಾಗಿರುವ ಸರ್ಕಾರಿ ನೌಕರ.

(ii) ಕರ್ತವ್ಯದಲ್ಲಿರುವಾಗ " ಎಂಬ ಪದಗಳು, ಅವನ ವಾಸದ ಸ್ಥಳದಿಂದ ಕೆಲಸದ ಸ್ಥಳಕ್ಕೆ ಅವನ ಪ್ರಯಾಣ ದೂರವನ್ನು ಒಳಗೊಳ್ಳುತ್ತದೆ.

(iii) 66 ಅವಲಂಬಿತರು " ಹಾಗೂ " ಕುಟುಂಬ ಸದಸ್ಯರು ' ಎಂಬ ಪದಗಳನ್ನು, ಮೃತ ಸರ್ಕಾರಿ ನೌಕರನ ಸಂಬಂಧದಲ್ಲಿ ವೈದ್ಯಕೀಯ ಆಧಾರಗಳ ಮೇಲೆ ಸರ್ಕಾರಿ ನೌಕರನ ಅವಲಂಬಿತರೆಂದು ಸಹ ಅರ್ಥಕಲ್ಪಿಸತಕ್ಕದ್ದು ಎಂದು ಪರಿಭಾಷಿಸಲಾಗಿದೆ.

(iv) ಈ ನಿಯಮಗಳಲ್ಲಿ, ಮೃತ ಸರ್ಕಾರಿ ನೌಕರನ ಸಂಬಂಧದಲ್ಲಿ 66 " ವಿಧವೆ " ಅಥವಾ " ವಿಧುರ " ಎಂಬ ಪದಗಳು ಬರುವ ಕಡೆಗಳಲ್ಲೆಲ್ಲಾ, ವೈದ್ಯಕೀಯ ಆಧಾರಗಳ ಮೇಲೆ ನಿವೃತ್ತರಾದ ಸರ್ಕಾರಿ ನೌಕರನ 66 " ಪತ್ನಿ " ಅಥವಾ " ಪತಿ " ಯೆಂದು ಅರ್ಥ ಕಲ್ಪಿಸತಕ್ಕದ್ದು.

15. ಸದರಿ ನಿಯಮದ ಜಾಗರೂಕತೆಯಿಂದ ಓದುವಿಕೆಯು, ವೈದ್ಯಕೀಯ ಆಧಾರಗಳ ಮೇಲೆ ನಿವೃತ್ತರಾದ ಸರ್ಕಾರಿ ನೌಕರನ ಅವಲಂಬಿತರ ನೇಮಕಾತಿಯು ಅನುಕಂಪದ ಆಧಾರಗಳ ಮೇಲೆ ನೇಮಕಾತಿಗೆ ಅರ್ಹವಾಗತಕ್ಕದ್ದು ಎಂಬುದನ್ನು, ಪರಂತು, ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರಗಳ ಮೇಲೆ ನೇಮಕಾತಿ) (ಆರನೇ ತಿದ್ದುಪಡಿ) ನಿಯಮಗಳು, 2011 ಪ್ರಾರಂಭವಾದ ದಿನಾಂಕದಂದು ವೈದ್ಯಕೀಯ ಆಧಾರಗಳ ಮೇಲೆ ನಿವೃತ್ತರಾದ ಸರ್ಕಾರಿ ನೌಕರನ ಎಲ್ಲಾ ಅರ್ಹ ಅವಲಂಬಿತರು, ಸದರಿ ನಿಯಮಗಳ ಪ್ರಾರಂಭವಾದ ದಿನಾಂಕದಿಂದ ಒಂದು ವರ್ಷದೊಳಗೆ ಅರ್ಜಿ ಸಲ್ಲಿಸಬಹುದು ಎಂಬುದನ್ನು ಸ್ಪಷ್ಟಪಡಿಸುತ್ತದೆ.

ವಿವರಣೆ:( 1) " ವೈದ್ಯಕೀಯ ಆಧಾರಗಳ ಮೇಲೆ ನಿವೃತ್ತನಾದ ಸರ್ಕಾರಿ ನೌಕರ ಎಂದರೆ ದೈಹಿಕವಾಗಿ ಅಥವಾ ಮಾನಸಿಕ ಆಶಕ್ತತೆಯ ಮೇಲೆ ಸಾರ್ವಜನಿಕ ಸೇವೆಯಲ್ಲಿ ಕರ್ತವ್ಯದಲ್ಲಿರುವಾಗ ಅಸಮರ್ಥನಾಗಿರುವ ಸರ್ಕಾರಿ ನೌಕರ ಹಾಗೂ ಕರ್ನಾಟಕ ಸಿವಿಲ್ ಸೇವಾ ನಿಯಮಗಳ ಪ್ರಕಾರ 1 ನೇ ಜನವರಿ 2010 ರ ಅಥವಾ ಆ ನಂತರದ

ದಿನದಂದು ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ರಚಿಸಿದ ವೈದ್ಯಕೀಯ ಮಂಡಳಿಯಿಂದ ಪ್ರಮಾಣೀಕರಿಸಲಾದಂಥ ವೈದ್ಯಕೀಯ ಆಧಾರಗಳ ಮೇಲೆ ನಿವೃತ್ತನಾಗಿರುವ ಸರ್ಕಾರಿ ನೌಕರ.

16. ಒಪ್ಪಿಕೊಂಡಿರುವಂತೆ, ಪ್ರಸ್ತುತ ಪ್ರಕರಣದಲ್ಲಿ, ನಿಯಮಗಳಿಗೆದಿನಾಂಕ: 13.10.2011 ರಿಂದ ಜಾರಿಗೆ ಬರುವಂತೆ ತಿದ್ದುಪಡಿಯಾದ ದಿನಾಂಕದಂದು ಇದ್ದಂತೆ ಮೂಲ ಅರ್ಜಿದಾರನು ನಿವೃತ್ತನಾಗಿರಲಿಲ್ಲ ಹಾಗೂ ಒಪ್ಪಿಕೊಂಡಿರುವಂತೆ, ಅವನುದಿನಾಂಕ: 22.12.2011 ರಂದು ವೈದ್ಯಕೀಯ ಆಧಾರಗಳ ಮೇಲೆ ನಿವೃತ್ತಿಯಾಗುವ ಸಂಬಂಧ ಹಾಗೂದಿನಾಂಕ: 29.2.2012 ರಂದು ಸೇವೆಯಿಂದ ನಿವೃತ್ತನಾಗಿದ್ದ ಕುರಿತು ಅರ್ಜಿಯನ್ನು ಸಲ್ಲಿಸಿದ್ದಾನೆ.ಅರ್ಜಿದಾರನು ಸಲ್ಲಿಸಿದ ಅರ್ಜಿಯ ದಿನಾಂಕದಂದು ಇದ್ದಂತೆ ನಿವೃತ್ತನಾಗಿರಲಿಲ್ಲ.ಅರ್ಜಿಯನ್ನು ಕಾಲಮಿತಿಯೊಳಗೆ ಸಲ್ಲಿಸಿದ್ದರೂ ಕೂಡ, ಅರ್ಜಿದಾರನು ಸೇವೆಯಲ್ಲಿದ್ದನೆಂಬ ಸಂಗತಿ ಹಾಗೇ ಉಳಿದಿದೆ ಹಾಗೂ ಅರ್ಜಿದಾರನು ದೈಹಿಕವಾಗಿ ಹಾಗೂ ಮಾನಸಿಕವಾಗಿ ಅಶಕ್ತನಾಗಿದ್ದು, ಸರ್ಕಾರಿ ಸೇವೆಯಲ್ಲಿರುವಾಗ ಶಾಶ್ವತವಾಗಿ ಅಸಮರ್ಥನಾಗಿದ್ದನು ಎಂಬುದರ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ರಚಿಸಿದ ವೈದ್ಯಕೀಯ ಮಂಡಳಿಯು ಅವನನ್ನು ಪ್ರಮಾಣೀಕರಿಸಿರಲಿಲ್ಲ.

17. ಅರ್ಜಿದಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ವೈದ್ಯಕೀಯ ಅಧಿಕಾರಿ ಟಿಕೋಟಾ ಇವರು ನೀಡಿದ ಹಾಗೂ ಡಾ || ಭಗವತಿ ನ್ಯೂರೋ ಕೇರ್ ಸೆಂಟರ್ ವಿಜಯಪುರ ಇವರು ನೀಡಿದ ಪ್ರಮಾಣಪತ್ರಗಳನ್ನು ಅವಲಂಬಿಸಿದ್ದರೂ ಕೂಡ, ತಿದ್ದುಪಡಿ ನಿಯಮಗಳಲ್ಲಿ ಪರಿಭಾಷಿಸಲಾದಂಥ ವೈದ್ಯಕೀಯ ಮಂಡಳಿಯೆಂದು ರಚಿಸಲು ಸಾಧ್ಯವಿಲ್ಲ.ಒಪ್ಪಿಕೊಂಡಿರುವಂತೆ, ಅರ್ಜಿದಾರನು ನಿಯಮಗಳು ಜಾರಿಗೆ ಬಂದ ದಿನಾಂಕದಂದು ನಿವೃತ್ತರಾಗಿರಲಿಲ್ಲ ಹಾಗೂ ಅರ್ಜಿದಾರನು ದೈಹಿಕವಾಗಿ ಹಾಗೂ ಮಾನಸಿಕವಾಗಿ ಅಶಕ್ತನಾಗಿದ್ದು ಸರ್ಕಾರಿ ಸೇವೆಯಲ್ಲಿರುವಾಗ ಶಾಶ್ವತವಾಗಿ ಅಸಮರ್ಥನಾಗಿದ್ದನೆಂಬುದನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ರಚಿಸಿದ ಯಾವುದೇ ವೈದ್ಯಕೀಯ ಮಂಡಳಿಯಿಂದ ಅವನು ಪ್ರಮಾಣೀಕರಿಸಿರಲಿಲ್ಲ.ಮೇಲೆ ತಿಳಿಸಲಾದ ಕಾರಣಗಳಿಗಾಗಿ, ಪ್ರಸ್ತುತ ರಿಟ್ ಅರ್ಜಿಯಲ್ಲಿ ಎತ್ತಲಾದ ವಿವಾದಾಂಶಕ್ಕೆ ನಕಾರಾತ್ಮಕವಾಗಿ ಉತ್ತರಿಸಬೇಕಾಗಿದ್ದು, ಮೂಲ ಅರ್ಜಿದಾರ ಸೈಯ್ಯದ್ ಹುಸೇನ್ ವೈದ್ಯಕೀಯ ಆಧಾರಗಳ ಮೇರೆಗೆ ಸೇವೆಯಿಂದ ನಿವೃತ್ತಿಗೊಳಿಸಲು ಅವನಿಗೆ ಅನುಮತಿ ನೀಡುವ ಯಾವುದೇ ವಿಷಯವನ್ನು ಮಾಡಿರುವುದಿಲ್ಲವೆಂದು ಅಭಿಪ್ರಾಯಪಡಲಾಗಿದೆ.

V.ಉಪಸಂಹಾರ:

18. ನ್ಯಾಯಾಧಿಕರಣವು, ದಾಖಲೆಯಲ್ಲಿರುವ ಸಂಪೂರ್ಣ ಸಾಕ್ಷ್ಯಾಧಾರವನ್ನು ಪರಿಗಣಿಸಿ, ಪ್ರಸ್ತುತ ಹಿಂಬರಹವು, ಅರ್ಜಿದಾರನು, ವಯೋನಿವೃತ್ತಿಯ ವಯಸ್ಸನ್ನು 29-2-2012ರಂದು ತಲುಪಿದ ಮೇಲೆ ಸೇವೆಯಿಂದ ನಿವೃತ್ತರಾಗುವ ಕಾರಣದಿಂದ, ಅವನು ವೈದ್ಯಕೀಯ ಆಧಾರದ ಮೇರೆಗೆ ನಿವೃತ್ತಿಗೆ ಅರ್ಹನಾಗಿರಲಿಲ್ಲ ಎಂಬುದನ್ನು ಸ್ಪಷ್ಟವಾಗಿ ವಿವರಿಸುತ್ತದೆಯೆಂಬ ನಿರ್ಣಯವನ್ನು ದಾಖಲಿಸಲಾಗಿದೆ.ಅವನಿಗೆ ಆರೋಗ್ಯ ಸರಿಯಿಲ್ಲದಿದ್ದರೆ ರಜೆಯನ್ನು ತೆಗೆದುಕೊಳ್ಳಲು ಸಲಹೆ ನೀಡಿದ್ದರೂ ಕೂಡ ತೆಗೆದುಕೊಂಡಿರಲಿಲ್ಲ.ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರಗಳ ಮೇಲೆ ನೇಮಕಾತಿ) (ಆರನೇ ತಿದ್ದುಪಡಿ) ನಿಯಮಗಳು, 2011 ರ 3 ಎ ನಿಯಮದ ಮೇರೆಗೆ ಅಗತ್ಯಪಡಿಸಲಾದಂತೆ ಸರ್ಕಾರಿ ಸೇವೆಯಲ್ಲಿರುವಾಗ ಅವನು ಶಾಶ್ವತವಾಗಿ

ಅಸಮರ್ಥನಾಗಿದ್ದನೆಂಬುದನ್ನು ತೋರಿಸಲು ಯಾವುದೇ ಆಧಾರಗಳಿರಲಿಲ್ಲ.ತದನುಸಾರವಾಗಿ, ಅರ್ಜಿಯನ್ನು ವಜಾಗೊಳಿಸಲಾಗಿದೆ.

19. ಮೇಲಿನದನ್ನು ದೃಷ್ಟಿಯಲ್ಲಿಟ್ಟುಕೊಂಡು, ಭಾರತ ಸಂವಿಧಾನದ 226 ಹಾಗೂ 227 ನೇ ಅನುಚ್ಛೇದಗಳ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸಿ ಎರಡನೇ ಎದುರುದಾರನು ಹೊರಡಿಸಿದ ಹಿಂಬರಹವನ್ನು ದೃಢೀಕರಿಸಿ ನ್ಯಾಯಾಧಿಕರಣವು ಹೊರಡಿಸಿದ ಪ್ರಶ್ನಿತ ಆದೇಶದಲ್ಲಿ ಹಸ್ತಕ್ಷೇಪ ಮಾಡಲು ಅರ್ಜಿದಾರನು ಯಾವುದೇ ಆಧಾರವನ್ನು ಹೊಂದಿರುವುದಿಲ್ಲ.

ತದನುಸಾರವಾಗಿ ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿದೆ.